Clause 1, the Long Title, the Preamble and the Enacting Formula were added to the Bill.

MOTION TO PASS

SRI M. VEERAPPA MOILY.—Sir, I beg to move :

"That the Karnataka Sales Tax (Amendment) Bill, 19(be passed".

MR. DEPUTY SPEAKER.—The question is :

"That the Karnataka Sales Tax (Amendment) Bill, 1982 be passed."

The motion was adopted and the Bill was passed.

THE KARNATAKA ENTERTAINMENTS TAX (AMENDMENT) BILL, 1982.

Motion to consider

SRI M. VEERAPPA MOILY.—Sir, I beg to move :

"That the Karnataka Entertainment Tax (Amendment) Bill, 1982 be taken into consideration."

The question was proposed

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ಮನೋರಂಜನಾ ತೆರಿಗೆ ತಿದ್ದುಪಡಿ ಮಸೂದೆಯಲ್ಲಿ ಕೂಡ ಮೂರು ವಿಚಾರಗಳನ್ನು ಅಳವಡಿಸಿದ್ದೇನೆ. ಮೊದಲನೆಯದಾಗಿ ತಮಗೆ ಗೊತ್ತಿರಬಹುದು, composition scheme for cinema theatres located in small villages and towns, ಇದನ್ನು ನಾವು ಮೊದಲು ಕಡ್ಡಾಯವಾಗಿ ಮಾಡಿದ್ದೆವು. ಇದನ್ನು ಕಡಾ ಯವಾಗಿ ಮಾಡಿದ್ದರಿಂದ ಏನಾಯಿತು ಎಂದರೆ, ದೊಡ್ಡ ಹಾಹಾಕಾರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸಿನೇಮಾ ಥಿಯೇಟರ್ ಮಾಲೀಕರಿಂದ ಬಂತು. ಈ ಸ್ಕೀಮ್‌ನಿಂದ ನಮಗೆ ತುಂಬಾ ನಷ್ಟವಾಗುತ್ತದೆ ಏಕೆಂದರೆ ನಾವು ಕೆಪಾಸಿಟಿಯನ್ನು ಹೊಂದಿಕೊಂಡು ತೆರಿಗೆ ನಿರ್ಣಯ ಮಾಡಬೇಕೆಂದು ಹೇಳಿದಾಗ ಈ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸಿನೇಮಾ ಮಂದಿರಗಳಲ್ಲಿ ಅನೇಕ ಬಾರಿ ಈ ಕೆಪಾಸಿಟಿ ತುಂಬಿರುವುದಿಲ್ಲ. ಈ ಸ್ಕೀಮ್‌ನ್ನು ಕಡ್ಡಾಯವಾಗಿ ನಡೆಸಬೇಕೆಂದು ಹೇಳಿದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಸಿನೇಮಾ ಮಂದಿರಗಳನ್ನು ನಡೆಸಲಿಕ್ಕೇ ಸಾಧ್ಯವಾಗುವುದಿಲ್ಲ ಎಂದು ಬಿಜಾಪುರ, ಬೆಳಗಾಮ್ ಮೊದಲಾಗಿ ಎಲ್ಲಾ ಜಿಲ್ಲೆಗಳಿಂದ ನಮಗೆ ಇದರ ಬಗ್ಗೆ ಸಾಕಷ್ಟು ಮನವಿಗಳು ಬಂದವು. ಆದಕ್ಕಾಗಿ ಈ ಮಸೂದೆಯಲ್ಲಿ ತಿದ್ದುಪಡಿಯನ್ನು ತರಬೇಕಾಗಿದೆ. ಅದೇನೆಂದರೆ ಈ composition scheme ಮಾಡತಕ್ಕಂಥಾದ್ದು ಕಡ್ಡಾಯವಾಗಿ ಬೇಕಾಗಿಲ್ಲ. It is optional. ಬೇಕಾದರೆ ತೆಗೆದುಕೊಳ್ಳಬಹುದು, ಇಲ್ಲದಿದ್ದರೆ ಸಾಮಾನ್ಯವಾದ ರೀತಿಯಲ್ಲೇ ತೆರಿಗೆಯನ್ನು ಕೊಡ ಬಹುದು We have introduced the optional system Instead of making it compulsory we have made it optional. ಎರಡನೇ ವಿಚಾರ ಎಂದರೆ ಪೇಟೆಯಲ್ಲಿ ಮತ್ತು ಹಳ್ಳಿಗಳಲ್ಲಿ ಇರತಕ್ಕಂಥ driving in theatres. ಇದರಲ್ಲಿ ಮೊದಲು ಏನು ambiguity ಇತ್ತು ಅದನ್ನು ಈ ತಿದ್ದುಪಡಿ ಮಸೂದೆಯಿಂದ ! ಸ್ಪಷ್ಟೀಕರಿಸಿದ್ದೇವೆ. ಮೂರನೆಯದು ಕನ್ನಡ, ಕೊಡವ, ಕೊಂಕಣಿ, ತುಳು ಈ ಭಾಷೆಯಲ್ಲಿ ತಯಾರಾಗತಕ್ಕಂಥ ಚಲನಚಿತ್ರಗಳಿಗೆ ಈಗ ೫೦ ಪರ್ಸೆಂಟ್ ಸಬ್ಸಿಡಿ, ವ ನರಂಜನಾ ತೆರಿಗೆ ರಿಯಾಯ್ತಿ ಕೊಡಬೇಕೆಂದು ಕಳೆದಬಾರಿ ಏನು ಮಾಡಿದ್ದೆವು, ಅದರ ಪರಿಣಾಮವಾಗಿ ಕರ್ನಾಟಕದಲ್ಲಿ ತಯಾರಿಸಿದಂತಹ ಯಾವ ಸಿನೇಮಾಗಳಿವೆ ಅವುಗಳಿಗೆ ಮಾತ್ರ ಈ ೫೦ ಪರ್ಸೆಂಟ್ ರಿಯಾಯ್ತಿ ಅನ್ವಯವಾಗುತ್ತವೆ. ಆದರೆ ತಮಗೆ ಗೊತ್ತಿರುವಂತೆ, ಹೊರಗಡೆ ಹಿಂದೆ

ಹಳೆಯ ಸಿನೇಮಾಗಳು ತಯಾರಾಗುತ್ತಿದ್ದವು. ಅವುಗಳು ಈಗಲೂ ಕೂಡ ಗ್ರಾಮಾಂತರ ಪ್ರದೇಶ ಗಳಲ್ಲಿ ಪ್ರದರ್ಶಿತವಾಗುತ್ತವೆ. ಇಂತಹ ಚಿತ್ರಗಳಿಗೆ ಈ ರಿಯಾಯ್ತಿ ದೊರೆಯದೇ ಇರುವುದರಿಂದ, ಅವರು ೫೦ ಪರ್ಸೆಂಟ್ ಮನರಂಜನಾ ತೆರಿಗೆಯನ್ನು ಕೊಡಬೇಕಾಗುತ್ತದೆ. ಪ್ರಮುಖವಾಗಿ ಪೌರಾಣಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಹಳೆಯ ಕನ್ನಡ ಚಿತ್ರಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತವೆ. ಇಂತಹ ಚಿತ್ರಗಳಿಗೆ ಅಲ್ಲಿ ಯಾವುದೇ ರೀತಿಯಲ್ಲಿ ರಿಯಾಯ್ತಿ ಇಲ್ಲದೇ ಇಲ್ಲ. ಎರಡನೆಯ ದಾಗಿ ಇಲ್ಲಿ ತಯಾರಿಸಿದಂತಹ ಚಿತ್ರಗಳಿಗೂ, ಮತ್ತು ಹೊರಗಡೆ ತಯಾರಿಸಿದಂತಹ ಚಿತ್ರಗಳಿಗೂ ಸಬ್ಸಿಡಿಯನ್ನು ಬೇರೆ ಬೇರೆ ಮಾಡಿದ್ದೆವು. ಮನರಂಜನಾ ತೆರಿಗೆ ವಿನಾಯಿತಿ ಹೊರಗಡೆ ತಯಾರಾದಂತಹ ಕನ್ನಡ ಚಿತ್ರಗಳಿಗೆ ಹೆಚ್ಚಾಗಿ ಇಲ್ಲ. ಇದರಿಂದ ನಷ್ಟವೇನೂ ಇಲ್ಲ. ವರ್ಷಕ್ಕೇ ಒಂದೆರಡು ಚಿತ್ರಗಳೂ ಕೂಡ ಈಗ ಹೊರಗಡೆ ತಯಾರಾಗುತ್ತಿಲ್ಲ. ಒಂದು ಕನ್ನಡ ಚಿತ್ರಕ್ಕೂ ಮತ್ತೊಂದು ಚಿತ್ರಕ್ಕೂ ವ್ಯತ್ಯಾಸವಿರುತ್ತದೆ. ನಾವು ತಯಾರಿಕಾ ದೃಷ್ಟಿಯಿಂದ ನೋಡುವುದಿಲ್ಲ. ಕನ್ನಡ ಭಾಷಾ ದೃಷ್ಟಿಯಿಂದ, ಕನ್ನಡ ಚಲನಚಿತ್ರ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ, ಚಿತ್ರಗಳನ್ನು ನೋಡತಕ್ಕವರ ದೃಷ್ಟಿಕೋನದಿಂದ ನೋಡಿದರೆ ಇದಕ್ಕೆ ವ್ಯತ್ಯಾಸವನ್ನು ಮಾಡತಕ್ಕ್ಂಥಾದ್ದು ಸರಿಯಲ್ಲ. ಆದ್ದರಿಂದಲೇ ಈ ತಿದ್ದುಪಡಿ ಮಸೂದೆಯನ್ನು ಮಂಡಿಸಿದ್ದೇನೆ. ಈ ಬಗ್ಗೆ President of the Karnataka Chamber of Commerce and Industries ಶ್ರೀ ಆರಸುಕುಮಾರ್ ಅವರು ಕೂಡ ಈ ವ್ಯತ್ಯಾಸ ಮಾಡ ಬಾರದು, ೫೦ ಪರ್ಸೆಂಟ್ ರಿಯಾಯ್ತಿ ಎಲ್ಲದಕ್ಕೂ ವಿಸ್ತರಿಸಬೇಕು ಎಂದು ಹೇಳಿದ್ದಾರೆ. ಆದರೆ ಪತ್ರಿಕೆಯಲ್ಲಿ ಈ ರಿಯಾಯ್ತಿ ಕೊಟ್ಟಿದ್ದು ತಪ್ಪು ಎಂದು ಹೇಳಿಕೆ ಕೊಟ್ಟು, ಮೊನ್ನೆ ೫೦ ಪರ್ಸೆಂಟ್ ಕೊಟ್ಟಿದ್ದು ಸರಿ. ಎಂದು ವ್ಯತಿರಿಕ್ತವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಕನ್ನಡ ಸಿನೇಮಾ ನೋಡತಕ್ಕ್ಂಥ ರಸಿಕರ ದೃಷ್ಟಿಯಿಂದ ನೋಡಿದರೆ ಇದು ಬಹಳ ಉಪಯುಕ್ತವಾದುದು. ಆದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಈ ರಿಯಾಯ್ತಿ ಕೊಟ್ಟಿದ್ದರಿಂದ ಆದರ ಪೂರ್ಣ ಉಪಯೋಗವಾಗುತ್ತದೆ ಎಂದು ಹೇಳಿ, ಈ ಮೂರು ವಿಚಾರಗಳನ್ನು ಅಳವಡಿಸಿಕೊಂಡು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಈ ಸದನ ತನ್ನ ಮಂಜೂರಾತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ತಮ್ಮಯ್ಯ.—ಮಾನ್ಯ ಆರ್ಥ ಮಂತ್ರಿಗಳು ತಂದಿರತಕ್ಕ್ಂಥ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ಮೂವತ್ತು ವರ್ಷಗಳಿಂದ ಹಳ್ಳಿ ಗಾಡಿನಲ್ಲಿ ಸಿನೇಮಾ ನಡೆಸಿದಂಥ ಅನುಭವ ನನಗಿದೆ. ಈಗ ತೆರಿಗೆಯನ್ನು ಚಲನಚಿತ್ರ ಮಂದಿರಗಳಿಗೆ ಹಾಕಿರುವುದು ಬೇರೆ, ಈ ಟೂರಿಂಗ್.ಟಾಕೀಸ್‌ಗಳಿಗೆ ಹಾಕಿರುವುದು ಬೇರೆ. ಇದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು ಟೂರಿಂಗ್ ಟಾಕೀಸ್‌ಗಳಲ್ಲಿ ಸೀಟುಗಳ ಸಂಖ್ಯೆ ಇಷ್ಟೇ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಿರ್ದಿಷ್ಟವಾಗಿ ಲೆಕ್ಕ ಇಡಲಾಗದಂತೆ ಜನರು ಬಂದು ಕುಳಿತು ಕೊಂಡು ಸಿನೇಮಾ ನೋಡುತ್ತಾರೆ. ಆದರೆ ಟಾಕೀಸ್‌ಗಳಲ್ಲಿ ಮಾತ್ರ ಇಷ್ಟೇ ಸೀಟು ಎಂದು ಟ್ಯಾಕ್ಸೇ ಶನ್ ಹಾಕಬಹುದು ಸರ್ಕಾರದವರು ಎಲ್ಲದಕ್ಕೂ ಒಂದೇ ತರಹ ತೆರಿಗೆ ಹಾಕಿದರೆ ಟೂರಿಂಗ್ ಟಾಕೀಸು ಗಳನ್ನು ನಡೆಸುವ ಜನರಿಗೆ ಅನುಕೂಲವಾಗುವುದರ ಬದಲು ಅನಾನುಕೂಲ ಆಗಬಹುದು. ಏಕೆಂದರೆ ಅಲ್ಲಿನ ಜನರ ಒಂದು ಮಟ್ಟ ಏನಿದೆ, ಅದಕ್ಕೆ ಅನುಗುಣವಾಗಿ ದರಗಳನ್ನು ಇಡುತ್ತಾರೆ. ಅದರ ಮೇಲೆ ತೆರಿಗೆ ಹಾಕುತ್ತಾರೆ. ಸರ್ಕಾರದವರು ೫೦ ಪರ್ಸೆಂಟ್ ಮಾಡಿದ್ದು ಸರಿ. ಮೊನ್ನೆ ನನ್ನ ಥಿಯೇಟರ್‌ನಲ್ಲಿ ೨೫ ಪರ್ಸೆಂಟ್ ಚಾಸ್ತಿ ಮಾಡಿದ್ದರಿಂದ ಜನಗಳು ರೊಚ್ಚಿಗೆದ್ದು ಐವತ್ತು ಸೀಟುಗಳನ್ನು ಮುರಿದುಹಾಕಿ ದ್ದಾರೆ. ಐವತ್ತು ಮಂದಿ ಪೋಲೀಸರನ್ನು ಕರೆಸಬೇಕಾಯಿತು. ಆದ್ದರಿಂದ ಈ ಟೂರಿಂಗ್ ಟಾಕೀಸ್ ಗಳಿಗೆ ಹಾಕತಕ್ಕ್ಂಥ ಮನರಂಜನಾ ತೆರಿಗೆಯನ್ನು ಯಾವ ರೀತಿ ಲೆಕ್ಕ ಹಾಕುತ್ತಾರೆ ಎಂಬುದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ. ಈ ಟೂರಿಂಗ್ ಟಾಕೀಸ್‌ಗಳ ಕತೆ ಹೇಳಿದರೆ ನಮ್ಮ ಮಾನ್ಯ ಮಿತ್ರರಿಗೆ ಮೈಚ್ಚುಗೆಯಾಗಲಿಕ್ಕಿಲ್ಲ. ಅನೇಕ ಟೂರಿಂಗ್ ಟಾಕೀಸ್‌ಗಳಲ್ಲಿ ರೈಡ್‌ಗಳನ್ನು ಮಾಡಿದಾಗ ಅಲ್ಲಿ ಟಿಕೇಟುಗಳನ್ನೇ ಕೊಟ್ಟಿಲ್ಲ ಎಂದು ಕಂಡುಬಂದಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ನಾನು ಒಪ್ಪುತ್ತೇನೆ ಸ್ವಾಮಿ. ಯಾವ ಯಾವ ಷೋಗೆ ಎಷ್ಟು ಎಂದು ಫಿಕ್ಸ್ ಮಾಡಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊದಲೇ ನಮೂದಿಸಿದಂತೆ ಈ ತಿದ್ದುಪಡಿಯಲ್ಲಿ ನಿಮಗೆ ಅನು ಕೂಲವಾಗಲಿ ಎನ್ನುವ ದೃಷ್ಟಿಯಿಂದಲೇ Composition Scheme ಅನ್ನು ಕಡ್ಡಾಯವಾಗಿ ಮಾಡಿಲ್ಲ.

Optional ಆಗಿ ಮಾಡಿದ್ದೇವೆ. ಇದರಿಂದ ಬಹಳ ಪ್ರಯೋಜನವಾಗುತ್ತದೆ. ಈ ಒಂದು ತಿದ್ದುಪಡಿಯಲ್ಲಿ ತಮ್ಮ ಸಮಸ್ಯೆಗಳಿಗೆ ಸರಿಯಾದಂಥ ಉತ್ತರ ಸಿಕ್ಕದೇಹೋದರೆ ಆಮೇಲೆ ಯೋಚನೆ ಮಾಡೋಣ.

MR. DEPUTY SPEAKER.—I will now put the consideration motion to the vote of the house. The question is :

"That the Karnataka Entertainments Tax (Amendment) Bill, 1982 be taken into consideration."

The motion was adopted

CLAUSE BY CLAUSE CONSIDERATION

CLAUSES 2 AND 3

MR. DEPUTY SPEAKER.—Since there are no amendments to the Clauses, I put clauses 2 and 3 to the vote of the House The question is :

"That clauses 2 and 3 do stand part of the Bill",

The motion was adopted

Clause 2 and 3 were added to the Bill.

CLAUSE 1, ETC.,

MR DEPUTY SPEAKER.—The question is.

"That Clause I, the Long Title, the Preamble and the Enacting Formula do stand part of the Bill.

The motion was adopted

Clause 1, the Long Title, the Preamble and the Enacting Formula were added to the Bill.

Motion to Pass

SRI M. VEERAPPA MOILY.—I beg to move :

"That the Karnataka Entertainments Tax (Amendment) Bill, 1982 be passed."

MR. DEPUTY SPEAKER.—The question is :

"That the Karnataka Entertainments Tax (Amendment) Bill, 1982 be passed".

The motion was adopted and the Bill was passed

The Karnataka Devadasis (Prohibition of Dedication) Bill, 1982

Motion to consider

SRI Y. RAMAKRISHNA (Minister for Law and Parliamentary Affairs).—Sir, on behalf of the Minister of State for Women and Children Welfare, I beg to move:

"That the Karnataka Devadasis (Prohibition of Dedication) Bill, 1982 be taken into consideration".

The question was proposed